ಶ್ರೀ ಡಿ. ಆರ್. ಕರಿಗೌಡ.—ಹೊಸಪೇಟೆಗೆ ಹೋದರೆ ಎಷ್ಟು ಭತ್ಯ ಸಿಕ್ಕುತ್ತದೆ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—12 ಆಣೆ.

ಶ್ರೀ ಡಿ. ಆರ್. ಕರಿಗೌಡ.—12 ಆಣೆ ಸಾಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಆದರೆ 1 ರೂಪಾಯಿ ಕೊಡಲಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಹೊಸಪೇಟೆಗೆ ಇಲ್ಲಿಂದ ಹೋದರೆ ಅಲ್ಲಿ ಎರಡು ಹೊತ್ತು ಊಟಕ್ಕೆ ಈ 12 ಆಣೆ ಸಾಕಾಗುವುದಿಲ್ಲ ಎಂದು ಹೇಳುತ್ತೇನೆ. ಸರ್ಕಾರದವರು ಅದನ್ನು ಒಪ್ಪಿಕೊಳ್ಳುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅವರವರ ಅಂತಸ್ತಿನ ಮೇಲೆ ಹೋಗುತ್ತದೆ.

Mr. SPEAKER.—It requires an answer.

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾಗುತ್ತದೆ ಎಂದು ಸರ್ಕಾರದ ಭಾವನೆ.

ಶ್ರೀ ಡಿ. ಆರ್. ಕರಿಗೌಡ.—ಪರಿಶೀಲನೆ ಮಾಡಬೇಕಾದರೆ, ಈ ಆರ್ಡರು ನುಮಾರು 20-30 ವರ್ಷಗಳ ಹಿಂದೆ ಮಾಡಿದ್ದು, ಈಗ ಬದಲಾವಣೆ ಮಾಡಬೇಕಾದದ್ದು ಅವಶ್ಯಕ ಎಂದು ಕಂಡುಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಯೋಚನೆ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಕಡಮೆ ಸಂಬಳ ಪಡೆಯುತಕ್ಕ ನೌಕರರ, ಅದರಲ್ಲೂ ಪೋಲೀಸ್ ಆಫೀಸರುಗಳ ಟಿ. ಎ., ಡಿ. ಎ., ಬಿಲ್ಲನ್ನು ಕಳುಹಿಸಿದ ನಂದರ್ಭದಲ್ಲಿ ಅವರಿಗೆ ನ್ಯಾಯವಾಗಿ ಬರಬೇಕಾಗಿರತಕ್ಕ ಪೊಬಲಿಗನಲ್ಲಿ, ಬಡ್ಜೆಟ್ ಪ್ರೊವಿಜ಼ಿ ಇಲ್ಲ ಎಂದೋ ಬೇರೆ ಕಾರಣದಿಂದಲೋ ಸ್ವಲ್ಪ ಹಣ ಹೊಡೆದುಹಾಕಿ ಅರ್ಜಿಚ್ರೆರಿ ಆಗಿ ಮಿತವಾದ ಹಣವನ್ನು ಬಿಲ್ ಪಾಸ್ ಮಾಡತಕ್ಕ ಆಫೀಸರು ಪಾಸ್‌ಮಾಡುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ. ಆ ರೀತಿ ಮಾಡಿದರೆ ತಪ್ಪು. ಅಂಥ ನಂದರ್ಭ ಸರ್ಕಾರದವರ ಗಮನಕ್ಕೆ ತಂದಲ್ಲಿ ಸರಿಪಡಿಸುತ್ತೇವೆ.

ಶ್ರೀ ಟಿ. ಹನುಮಯ್ಯ.—ಮೈಸೂರು ಸರ್ವಿಸ್ ರೆಗ್ಯುಲೇಷ್ಷ್ ರೂಲ್ಸ್ 470 ಮತ್ತು 471 ಎಷ್ಟು ದಿವನಗಳ ಹಿಂದೆ ಮಾಡಿದ್ದು, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿಲ್ಲ.

ಶ್ರೀ ಟಿ. ಹನುಮಯ್ಯ.—ಈ ಸರ್ವಿಸ್ ರೆಗ್ಯುಲೇಷ್ಷ್ ಬಹಳ ಹಿಂದಿನ ಕಾಲದ್ದು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ಹಿಂದಿನ ಕಾಲದ್ದು ಎಂದು ಗೊತ್ತು.

ಶ್ರೀ ಟಿ. ಹನುಮಯ್ಯ.—ಈಗ ಸುಪೀರಿಯರ್ ಮತ್ತು ಇಫೀರಿಯರ್ ಆಫೀಸರುಗಳಿಗೆ ಈ ದಿನ ಭತ್ಯ ಕೊಡುತ್ತ ಇರುವುದು ಅವರ ಊಟದ ವ್ಯವಸ್ಥೆಗೆ ತಾನೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಹನುಮಯ್ಯ.—ಸಾವಿರ ರೂಪಾಯಿ ಸಂಬಳ ಬರುವವರಿಗೆ ಹೋಟೆಲಿನಲ್ಲಿ ಜಾಸ್ತಿ ಚಾರ್ಜ್ ಮಾಡುತ್ತಾರೆ, 10 ರೂಪಾಯಿ ಸಂಬಳ ಬರುವವರಿಗೆ ಕಡಮೆ ಚಾರ್ಜ್ ಮಾಡುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ದೊಡ್ಡ ಪ್ರಶ್ನೆ ಆದು, ತತ್ವಕ್ಕೆ ಸಂಬಂಧಪಟ್ಟ ವಿಚಾರ; ಇದು ಮೊದಲನಿಂದಲೂ ಇದೆ. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ ಎಂದು ಹೇಳಬಲ್ಲೆ.

ಶ್ರೀ ಟಿ. ಹನುಮಯ್ಯ.—ನನ್ನ ಪ್ರಶ್ನೆ ಏನೆಂದರೆ, ಒಬ್ಬ 10 ರೂಪಾಯಿ ಸಂಬಳ ಬರತಕ್ಕ ಕ್ಲಾರ್ಕ್ ಆಫೀಸರ ಜೊತೆಯಲ್ಲಿ ಹೋಗುತ್ತಾನೆ; ಅವನಿಗೆ 12 ಆಣೆ ದಿನ ಭತ್ಯ ಕೊಡುತ್ತೀರಿ. ಹೋಟೆಲುಗಳಲ್ಲಿ ಅವನಿಗೂ ಒಂದೇ ಚಾರ್ಜು, ಸಾವಿರ ರೂಪಾಯಿ ಬರುವವನಿಗೂ ಒಂದೇ ಚಾರ್ಜು ಮಾಡುತ್ತಾರೆಯೇ ಎಂದು.

Mr. SPEAKER.—That question has been answered.

Panchajanya Weekly (Government Patronage).

Q.—551. Sri A. MUNIYAPPA (Sidlaghatta - Chikballapur—Scheduled Castes).—

Will the Government be pleased to state :—

(*a*) whether it has come to their notice that the weekly, *viz.*, 'Panchajanya' is a paper published for the upliftment of Depressed Classes ;

(*b*) whether the copies of this weekly were being purchased by Government in the past and distributed to Depressed Classes free of cost ;

(*c*) if so, the number of copies that were being purchased and the rate at which purchased ;

(*d*) whether the copies of this weekly are even now being purchased and distributed to the poor people of that class ;

(*e*) if not, since when was this stopped and the reasons therefor ?

A.—Sri Kadidal MANJAPPA (Minister for Revenue and Public Works) [On behalf of SRI K. HANUMANTHAIYA (Chief Minister)].—

(*a*) The paper has come to the notice of Government.

(*b*) Yes.

(*c*) Two thousand copies at the rate of Re. 0-2-0 (two annas) per copy.

(*d*) Not now.

(*e*) Since 1st October 1952. It was felt that the money that was being spent for this purpose could be utilised better on other Depressed Class amelioration works.

ಶ್ರೀ ಎ. ಮುನಿಯಪ್ಪ.—ಹಿಂದಿನ ಮಂತ್ರಿಮಂಡಲದವರು ಈ ಪತ್ರಿಕೆ ಹರಿಜನರ ಏಳಿಗೆಗೆ ಪ್ರಚಾರಕ್ಕಾಗಿ ಅಗತ್ಯ ಎಂದು ಕಂಡುಬಂದದ್ದರಿಂದ ತಾನೆ ಇದನ್ನು ಕೊಂಡುಕೊಳ್ಳುತ್ತಾ ಇದ್ದುದನ್ನು ಮುಂದುವರಿಸಿಕೊಂಡು ಬಂದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಕಾರಣಕ್ಕಾಗಿ ಈ ಪತ್ರಿಕೆಯನ್ನು ಕೊಂಡುಕೊಳ್ಳುತ್ತಾ ಇದ್ದರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಸರ್ಕಾರದವರು ಪರಿಶೀಲನೆಮಾಡಿ ಈ ಪತ್ರಿಕೆಯಲ್ಲಿ ಹಳೆಯನುದ್ದಿ ಬರುತ್ತದೆ ಅದರಿಂದ ಅನ್ಪೃಶ್ಯತಾನಿವಾರಣೆ ಆಗುವುದಿಲ್ಲ ಎಂದು ಹೇಳಿ ಮನಗಂಡಿದ್ದರಿಂದ ಈ ಪತ್ರಿಕೆ ಕೊಂಡುಕೊಳ್ಳುವುದನ್ನು ನಿಲ್ಲಿಸಲಾಯಿತು.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಅಧಿಕಾರಿಗಳಿಗೂ ಮತ್ತು ಹರಿಜನರ ಮುಖಂಡರುಗಳಿಗೂ ಈ ಪತ್ರಿಕೆಯ ಪ್ರತಿಗಳನ್ನು ಇದುವರೆಗೂ ಒದಗಿಸುತ್ತಾ ಇದ್ದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರಾರಿಗೆ ಒದಗಿಸುತ್ತಾ ಇದ್ದರೋ ಗೊತ್ತಿಲ್ಲ, ನೋಟೀಸ್ ಬೇಕು.

ಶ್ರೀ ಎ. ಮುನಿಯಪ್ಪ.—ಈ ಪಾಂಚಜನ್ಯ ಪತ್ರಿಕೆಯ ವಿಷಯದಲ್ಲಿ ಹರಿಜನ ಮುಖಂಡರು ಮತ್ತು ಅಧಿಕಾರಿಗಳಿಂದ ವರದಿ ತರಿಸಿಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವರದಿ ಯಾರಿಂದ ಬಂದಿತ್ತೋ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ಹರಿಜನರು ಇನ್ನು ಕೆಲವೇ ವರ್ಷಗಳಲ್ಲಿ ಸವರ್ಣೀಯರ ಜೊತೆಗೆ ಉತ್ತಮಸ್ಥಿತಿಗೆ ಬರಲು ಇಂಥ ಪತ್ರಿಕೆಗಳ ಮೂಲಕ ಪ್ರಚಾರಕಾರ್ಯ ಮಾಡತಕ್ಕದ್ದು ಅವಶ್ಯಕವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಪತ್ರಿಕೆಗಳಲ್ಲೂ ಅದು ನಡೆಯುತ್ತಾ ಇದೆ. ಈ ಪತ್ರಿಕೆಯಿಂದ ಅದಕ್ಕೆ ಹೆಚ್ಚು ಸಹಾಯವಾಗುವುದಿಲ್ಲ ಎಂದು ಸರ್ಕಾರಕ್ಕೆ ಕಂಡುಬಂದದ್ದರಿಂದ ಇದನ್ನು ನಿಲ್ಲಿಸಲಾಯಿತು.

ಶ್ರೀ ಎ. ಮುನಿಯಪ್ಪ.—ಇದರಮೂಲಕ ಸರಿಯಾಗಿ ಪ್ರಚಾರ ಆಗುತ್ತಾ ಇದ್ದುದರ ಬಗ್ಗೆ ಯಾರಾದರೂ ವರದಿ ಕಳುಹಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪತ್ರಿಕೆಯಲ್ಲಿ ಹಳೆಯನುದ್ದಿ ಬರುತ್ತಾ ಇತ್ತು ಎಂದು ಆಗಲೇ ಅರಿಕೆ ಮಾಡಿಕೊಂಡೆ.

ಶ್ರೀ ಆರ್. ಮುನಿಸ್ವಾಮಯ್ಯ.— ಇದು ವಾರ ಪತ್ರಿಕೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದರೆ ವಾರದ ವಿಷಯಗಳು ಹಳೆಯ ವಿಷಯಗಳಾಗುವುದಿಲ್ಲವೇ ?

Mr. SPEAKER.—That requires no answer.

ಶ್ರೀ ಜಿ. ದುಗ್ಗಪ್ಪ.—ಈ ಪತ್ರಿಕೆಯಿಂದ ಸಾಕಾದಷ್ಟು ಉಪಯೋಗವಾಗಲಿಲ್ಲ. ಎಂಬ ಬಗ್ಗೆ ಸರ್ಕಾರಿ ಅಧಿಕಾರಿಗಳಿಂದ ಏನಾದರೂ ವರದಿ ತರಿಸಿಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವರದಿ ತರಿಸಿಕೊಂಡಿದ್ದು ನನಗೆ ನೆನಪಿಲ್ಲ. ಆದರೆ ಸರ್ಕಾರದ ಅಧಿಕಾರಿಗಳಿಂದ ತಿಳಿದುಬಂದಿದ್ದರಲ್ಲಿ ಈ ಪತ್ರಿಕೆಯಿಂದ ಅಸ್ಪೃಶ್ಯತಾ ನಿವಾರಣೆ ಆಗುತ್ತದೆ ಎಂದು ಸರ್ಕಾರಕ್ಕೆ ಕಂಡುಬಂದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಆ ರೀತಿ ಈ ಪತ್ರಿಕೆಯಿಂದ ಉಪಯೋಗವಾಗುತ್ತಿಲ್ಲ ಎಂಬ ಬಗ್ಗೆ ಅಧಿಕಾರಿಗಳಿಂದ ಏನಾದರೂ ಸರ್ಕಾರದವರು ವರದಿ ತರಿಸಿದ್ದೀರಾ ?

Sri Kadidal MANJAPPA.—I have answered that question.

ಶ್ರೀ ಆರ್. ಚನ್ನಿಗರಾಮಯ್ಯ.—ಮಾನ್ಯ ಮಂತ್ರಿಗಳು ಹಳೆಯ ವಿಷಯ ಪ್ರಿಂಟ್ ಮಾಡುತ್ತಾ ಇದ್ದರು ಎಂದು ಹೇಳಿದರು. ಹಳೆಯ ವಿಷಯ ಎಂದರೆ ಏನು ಎಂಬುದನ್ನು ಡಿಫೈನ್ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ದಿವಸಗಳ ಹಿಂದೆ ಬೇರೆ ಪತ್ರಿಕೆಗಳಲ್ಲಿ ಬಂದದ್ದನ್ನೇ ತಿಳಿಸುವುದಕ್ಕೆ ಹಳೆಯ ವಿಷಯ ಎಂದು ಹೇಳುವುದು.

ಶ್ರೀ ಎ. ಭೀಮಪ್ಪನಾಯಕ್.—ಬೇರೆ ವಿಷಯಗಳು ಬಹಳ ದಿವಸಗಳ ಹಿಂದೆ ಬಂದದ್ದಕ್ಕೂ ನಿನ್ನೆ ಬಂದದ್ದಕ್ಕೂ ವ್ಯತ್ಯಾಸವಾಗುತ್ತದೆಯೇ ? ಹರಿಜನೋದ್ಧಾರದ ವಿಚಾರದಲ್ಲಿ ಬಂದ ಆರ್ಟಿಕಲ್ಸು ನಿನ್ನೆಗೂ ಇವತ್ತಿಗೂ ವ್ಯತ್ಯಾಸವಾಗುತ್ತವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆರ್ಟಿಕಲ್ಸ್ ವಿಷಯ ಹೇಳಲಿಲ್ಲ ; ನ್ಯೂಸ್ ವಿಚಾರ ಹೇಳಿದೆ.

ಶ್ರೀ ಎ. ಭೀಮಪ್ಪನಾಯಕ್.—ಇದು ನ್ಯೂಸ್ ಪೇಪರ್ ಅಲ್ಲ. ಮುಖ್ಯವಾಗಿ ಹರಿಜನೋದ್ಧಾರಕ್ಕಾಗಿ ಬರೆದ ಆರ್ಟಿಕಲ್ಸು ಬರುತ್ತಿತ್ತು. ಅದರ ಮಧ್ಯೆ ಏನಾದರೂ ನ್ಯೂಸ್ ಹಾಕಿದ್ದರೆ ಅದಕ್ಕೆ ಶಿಕ್ಷೆ ಕೊಡಬೇಕು, ನ್ಯೂಸ್ ಸರಿಯಾಗಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು, ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಎ. ಭೀಮಪ್ಪನಾಯಕ್.—ಇದು ಈಗಲೂ ಕೂಡ ಹರಿಜನರ ಏಳಿಗೆಗಾಗಿ ಏನಾದರೂ ವಿಷಯಗಳನ್ನು ಪಬ್ಲಿಷ್ ಮಾಡುತ್ತಾ ಇದ್ದರೆ. ಅಂಥದ್ದಕ್ಕೆ ಉತ್ತೇಜನ ಕೊಡುವುದು, ಅದು ಹರಿಜನರಿಗೆ ನೀರು ಎಂತೆ ಮಾಡುವುದು ಸರ್ಕಾರದವರ ಕರ್ತವ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪತ್ರಿಕೆಗೆ ಉತ್ತೇಜನ ಕೊಡುವುದು ಮುಖ್ಯವಾದದ್ದಲ್ಲ. ಅದರಿಂದ ಹರಿಜನರಿಗೆ ಪ್ರಯೋಜನವಾಗುವುದಾದರೆ ಉತ್ತೇಜನ ಕೊಡಬೇಕಾಗುತ್ತದೆ. ಪ್ರಯೋಜನವಿಲ್ಲವೆಂದು ಕಂಡು ಬಂದದ್ದರಿಂದ ನಿಲ್ಲಿಸಲಾಯಿತು. ಪುನಃ ಪರಿಶೀಲನೆ ಮಾಡೋಣ.

Sri R. CHANNIGARAMIAH.—Is the Hon'ble Minister aware, Sir, that the then Commissioner for Depressed Classes has recommended that this paper has been doing very good service to the Harijan community ?

Sri Kadidal MANJAPPA.—I want notice please.

Sri A. BHEEMAPPA NAIK.—Does it not contain mainly articles concerning the upliftment of Harijans ?

Sri Kadidal MANJAPPA.—Mainly it contains according to my information news and secondarily articles.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಪತ್ರಿಕೆಯ ಸಂಪಾದಕರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀಮತಿ ರುಕ್ಮಿಣಿಯಮ್ಮ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಿಂದೆ ದೇಶದಲ್ಲಿ ಈ ಪತ್ರಿಕೆ ಎಷ್ಟು ಖರ್ಚಾಗುತ್ತಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ದಿವಸ ಈ ಪತ್ರಿಕೆ ಎಷ್ಟು ಖರ್ಚಾಗುತ್ತಿದೆಯೆಂಬುದಕ್ಕೆ ಅಂಕಿ ಅಂಶವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ಈ ಪತ್ರಿಕೆ ಹೊರಡುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದೆಂದು ಕಾಣುತ್ತದೆ, ನಿಖರವಾದ ಸಮಾಚಾರ ತಿಳಿಯದು.

ಶ್ರೀ ಸ್. ಪುಟ್ಟಸ್ವಾಮಿ.—ಹರಿಜನರ ಏಳಿಗೆ ಬಗ್ಗೆ ಪ್ರಚಾರಕ್ಕಾಗಿ ಯಾವುದಾದರೂ ಪತ್ರಿಕೆಯನ್ನು ಹೊರಡಿಸಬೇಕೆಂದು ಆಲೋಚನೆ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಸರ್ಕಾರದ ಪರವಾಗಿ ಪ್ರಕಟವಾಗುತ್ತಿರುವ ಕೆಲವು ಪತ್ರಿಕೆಗಳಿವೆ. ಅವುಗಳಲ್ಲಿ ಹರಿಜನರ ಅಭಿವೃದ್ಧಿಗಾಗಿ ಕೆಲವು ಲೇಖನಗಳು ಬರುತ್ತಿರುವುದರಿಂದ ಹೊಸದಾಗಿ ಒಂದು ಪತ್ರಿಕೆಯನ್ನು ಈ ವಿಚಾರದಲ್ಲಿ ಹೊರಡಿಸಬೇಕೆಂದು ಸರ್ಕಾರ ಯೋಚನೆ ಮಾಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಹರಿಜನರ ಏಳಿಗೆಗಾಗಿಯೇ ಅಲಾಯಿದ ಒಂದು ಪತ್ರಿಕೆ ಹೊರಡಿಸುವುದನ್ನು ಸರ್ಕಾರದವರು ಆಲೋಚಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಗತ್ಯ ಕಂಡು ಬಂದರೆ ನೋಡೋಣ.

ಶ್ರೀ ಪಿ. ಆರ್. ರಾಮಯ್ಯ.—ಈಗ ಹರಿಜನ ಅಭ್ಯುದಯ ಎಂಬ ಪತ್ರಿಕೆಯನ್ನು ಹೊರಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಟಿ. ಹನುಮಯ್ಯ.—ಇದು ವೃತ್ತಪತ್ರಿಕೆಯೆ ಅಥವಾ ಪ್ರಚಾರ ಪತ್ರಿಕೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಶ್ನೆಯಲ್ಲಿ ಪತ್ರಿಕೆ ಎಂದು ಕೇಳಿರುವುದರಿಂದ ಉತ್ತರದಲ್ಲಿ ನಾವೂ ಹಾಗೆಯೇ ಹೇಳಿದ್ದೇವೆ.

ಶ್ರೀ ಟಿ. ಹನುಮಯ್ಯ.—ಈ ಪತ್ರಿಕೆಯು ಬೇಡವೆಂದು ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿಯು ಹೇಳಿದೆಯೇ?

Mr. SPEAKER.—That has been answered.

Members of Legislature (Lodging facilities).

Q.—602. Sri N. HUCHMASTHY GOWDA (Huliyurdurga).—

Will the Government be pleased to state:—

(*a*) the lodging facilities provided at present for the members of the Legislative Assembly and Legislative Council at Bangalore;

(*b*) the action taken to provide better lodging facilities than at present?

A.—Sri Kadidal MANJAPPA (Minister for Revenue and Public Works) [On behalf of SRI K. HANUMANTHAIYA (Chief Minister)].—

(*a*) The members are being provided with fully furnished accommodation without payment of rent as required in Section 9 (A) of the Mysore Legislature Salaries Act, 1952.

(*b*) This is under consideration.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈಗಿರುವ ಗೆಸ್ಟ್ ಕ್ವಾರ್ಟರ್ಸ್‌ಗಳು ಬವಾನರು ವಗೈರೆ ದೊಡ್ಡ ದೊಡ್ಡ ಅಧಿಕಾರಿಗಳು ಪಾನಮಾಡುವುದಕ್ಕಾಗಿ ಕಟ್ಟಿರೆ ತಕ್ಕುವಲ್ಲವೆ?

Mr. SPEAKER.—It requires no answer.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅವು ಈಗ ಮಾನ್ಯ ಸಭಾ ಸದಸ್ಯರುಗಳು ಗಹನವಾದ ವಿಷಯಗಳನ್ನು ಅಧ್ಯಯನ ಮಾಡುವುದಕ್ಕೆ ಸಹಕಾರಿಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಸಾಕಾದಷ್ಟು ಸೌಕರ್ಯವಿದೆಯೆಂಬುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಕುರ್ಚಿ, ಮಂಚ ಇವೆಲ್ಲಾ ಹಾಕಿರುವುದೇ ಸೌಕರ್ಯವೇ? ಓದುವುದಕ್ಕೆ ಪ್ರತ್ಯೇಕ ಕೊಠಡಿ ಮುಂತಾದ ಸೌಲಭ್ಯವನ್ನು ಒದಗಿಸಬೇಡವೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—1955-56ನೆಯ ಸಾಲಿನಲ್ಲಿ ಹಣಕಾನನ್ನೊದಗಿಸಿ ತಕ್ಕ ಕಟ್ಟಡ ಕಟ್ಟಲು ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಕೋರಿಕೆಯನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

Sri S. SRINIVASA IYENGAR.—Will the Government be pleased to state whether they are aware of the congestion in the Crescent House?

Sri Kadidal MANJAPPA.—It is a nice building. (*Laughter.*)

Sri S. SRINIVASA IYENGAR.—Have they ascertained how it looks in each room?

Sri Kadidal MANJAPPA.—I was staying myself there as a member of this House; rooms are quite comfortable.

Sri S. SRINIVASA IYENGAR.—Has the Government ascertained how they are today?

Sri Kadidal MANJAPPA.—It has not changed.

Sri S. SRINIVASA IYENGAR.—Are Government aware that in a room of 10 x 20, there are three members housed?

Sri Kadidal MANJAPPA.—I must tell the Hon'ble Member that as a member when I used to stay there, four members were staying.

Sri S. SRINIVASA IYENGAR.—Are the Government aware that members have to do a lot of study nowadays? (*Laughter*).

(No answer)